# ಕರ್ನಾಟಕ ವಿಧಾನ ಪರಿಷತ್ತು
## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಸ್ತಾವನೆಗೆ ಉತ್ತರ

**ಪ್ರಸ್ತಾವನೆ:**

ಪವರ್ ಸುದ್ದಿ ವಾಹಿನಿಯಲ್ಲಿ "ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕನ್ನಡದ ಕಗ್ಗೊಲೆ!" ಎಂಬ ತಲೆ ಬರಹದಡಿಯಲ್ಲಿ ಪ್ರಸಾರಗೊಂಡ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರುತ್ತೇನೆ. ಬೆಂಗಳೂರಿನಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕನ್ನಡದ ಕಗ್ಗೊಲೆ ನಡೆದಿದ್ದು, ಚಲನ ಚಿತ್ರೋತ್ಸವದ ಚಿತ್ರಸಾರಾಂಶ ಪುಸ್ತಕದಲ್ಲಿ ಚಲನಚಿತ್ರ ಅಕಾಡೆಮಿ ಸಾಕಷ್ಟು ಎಡವಟ್ಟು ಮಾಡಿಕೊಂಡಿದೆ. ಕೆಲವು ಕಡೆ ಪದಗಳನ್ನು ತಪ್ಪಾಗಿ ಬರೆದರೆ, ಇನ್ನು ಕೆಲವು ಕಡೆ ಬರೆದಿರುವ ಕನ್ನಡವನ್ನು ಓದಿದರು ಕೂಡ ಅದರ ಅರ್ಥ ತಿಳಿಯದಂತೆ ಚಿತ್ರ ಸಾರಾಂಶ ಪುಸ್ತಕವನ್ನು ಮುದ್ರಿಸಲಾಗಿದೆ. ಹೌದು. ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಯನ್ನೆ ತಪ್ಪಾಗಿ ಮುದ್ರಿಸಿ ವಿದ್ಯಾರ್ಥಿಗಳ ಜೀವನದ ಜೊತೆ ಆಟವಾಡುತ್ತಿರುವ ಸರ್ಕಾರ, ಇದೀಗ ಕನ್ನಡದ ಮಾನವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹರಾಜು ಹಾಕಿದೆ. ಚಲನಚಿತ್ರೋತ್ಸವದ ಚಿತ್ರಸಾರಾಂಶ ಪುಸ್ತಕದಲ್ಲಿ ಸಾಕಷ್ಟು ಎಡವಟ್ಟಾಗಿದ್ದು 'ಆರೈಕೆ' ಪದದ ಬದಲಾಗಿ ಹಾರೈಕೆ', 'ಮೀರಿ' ಪದದ ಬದಲಾಗಿ 'ಮಿರಿ' ಎಂದು ಮುದ್ರಿಸಿದ್ದಾರೆ. ಇನ್ನು ಭಾವಾನುವಾದದ ಬಗ್ಗೆ ಕೇಳೋದೆ ಬೇಡ 'ಯಾವುದೇ ಸಾಮ್ರಾಜ್ಯ ಪತನವಾದ ನಂತರ ಅಲ್ಲಿದ್ದ ಜನರ ಭವಿಷ್ಯ ಅವಶೇಷಗಳ ಅಡಿ ಹೂತು ಹೋಗುತ್ತದೆ' ಎಂದು ಮುದ್ರಿಸುವ ಬದಲು ಸಾಮ್ರಾಜ್ಯದ ಪತನದ ನಂತರ ಮಾನವನ ಕಳೇಬರ ಅವಶೇಷಗಳ ಅಡಿಯಲ್ಲಿ ಹೂತು ಹೋಗುತ್ತದೆ ಎಂದು ಮುದ್ರಿಸಲಾಗಿದೆ. ಚಿತ್ರದ ಸಾರಾಂಶವನ್ನು ಬರೆಯುವಲ್ಲಿ ಹತ್ತಾರು ಎಡವಟ್ಟು ಮಾಡಿಕೊಂಡಿರುವ ಚಲನಚಿತ್ರ ಅಕಾಡೆಮಿ -ಭಾಷಾಂತರಕ್ಕೆ AI ಅಥವಾ ಗೂಗಲ್ ಟ್ರಾನ್ಸಲೇಟ್ ಬಳಕೆ ಮಾಡಿಕೊಂಡಿದ್ದೆ ಇದಕ್ಕೆಲ್ಲಾ ಕಾರಣವಾಗಿದ್ದು, ಕನ್ನಡ ನಾಡಿನಲ್ಲಿ ಕನ್ನಡ ಕೊಲೆಯಾಗುತ್ತಿರುವುದು ನಿಜಕ್ಕೂ ಆಘಾತಕಾರಿ ಸಂಗತಿಯಾಗಿದೆ. ಆದ್ದರಿಂದ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಈ ರೀತಿ ಆಗದಂತೆ ಕ್ರಮವಹಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಸಚಿವರನ್ನು ಶೂನ್ಯ ವೇಳೆಯಲ್ಲಿ ಆಗ್ರಹಿಸುತ್ತೇನೆ.

**ಉತ್ತರ :**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿ ಜಂಟಿಯಾಗಿ 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಬೆಂಗಳೂರಿನಲ್ಲಿ ಆಯೋಜಿಸಿದೆ. ಕನ್ನಡ ಮತ್ತು ಕರ್ನಾಟಕ ಪ್ರಾದೇಶಿಕ ಭಾಷೆಯ ಚಲನಚಿತ್ರಗಳು ಸೇರಿದಂತೆ ದೇಶ - ವಿದೇಶದ 200ಕ್ಕೂ ಹೆಚ್ಚು ಚಲನಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ.

ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಸಾಮಾನ್ಯವಾಗಿ ನೀಡುವ ಮಾಹಿತಿಗಳು ಆಂಗ್ಲಭಾಷೆಯಲ್ಲಿರುತ್ತದೆ. ದೇಶ-ವಿದೇಶಿ ಭಾಷೆಯ ಚಲನಚಿತ್ರಗಳನ್ನು ನೋಡಲು ಬರುವ ಕನ್ನಡಿಗರಿಗೂ ಕನ್ನಡ ಭಾಷೆಯಲ್ಲಿಯೇ ಕಥಾಸಾರಾಂಶವನ್ನು ನೀಡಬೇಕೆನ್ನುವ ಒತ್ತಾಸೆಯಿಂದ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಎಲ್ಲಾ ಚಲನಚಿತ್ರಗಳ ಕಥಾಸಾರಾಂಶದ ಸಂಕ್ಷಿಪ್ತ ಟಿಪ್ಪಣಿಯಿಂದ ಕೂಡಿರುವ ಚಿತ್ರ ಸಹಿತ ಕಿರುಹೊತ್ತಿಗೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿ ವತಿಯಿಂದ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಹೊರತರಲಾಗಿದೆ.

200ಕ್ಕೂ ಹೆಚ್ಚು ಚಲನಚಿತ್ರಗಳ ಕಥಾಸಾರಾಂಶವು ಇಂಗ್ಲೀಷ್ ಭಾಷೆಯಲ್ಲಿ ಫೆಬ್ರವರಿ ಮಾಹೆಯಲ್ಲಿ ಸಲ್ಲಿಕೆಯಾಗಿದ್ದವು. ಇವುಗಳನ್ನು ಕನ್ನಡಕ್ಕೆ ಭಾಷಾಂತರ/ ತರ್ಜುಮೆಯನ್ನು ಮಾಡಿ, ಪುಸ್ತಕದ ಮುದ್ರಣ ಕಾರ್ಯ ವಿಳಂಬವಾಗಬಾರದು ಮತ್ತು ಸಮಯಕ್ಕೆ ಸರಿಯಾಗಿ ಕಿರುಹೊತ್ತಿಗೆಯನ್ನು ಚಿತ್ರ ಪ್ರೇಮಿಗಳಿಗೆ ಬಿಡುಗಡೆ ಮಾಡಬೇಕೆನ್ನುವ ಸದುದ್ದೇಶದಿಂದ ಹಾಗೂ ಕೊನೆಯ ಹಂತದ ಒತ್ತಡ ಮತ್ತು ಸಮಯದ ಅಭಾವದಿಂದ ಕಾಗುಣಿತ ದೋಷಗಳು (ಟೈಪೋಗ್ರಾಫಿಕ್) ಉಳಿದುಕೊಂಡಿರುತ್ತದೆ. ಮುಂದಿನ ಚಲನಚಿತ್ರೋತ್ಸವದಲ್ಲಿ ಇಂತಹ ತಪ್ಪುಗಳು ನುಸುಳದಂತೆ ಕ್ರಮ ವಹಿಸಲಾಗುವುದು.

**ಕೆಸಿಐ-ಪಿಐಪಿ/76/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ